1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2794/2016

ಚಾಸಾ:3 ಪ್ರಾಸಾ:4

ದಿನಾಂಕ: 06.07.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಪ್ರಸನ್ನ ಆಚಾರ್ |
| ತಂದೆಯ ಹೆಸರು | : | ಪ್ರಭಾಕರ ಆಚಾರ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಇಂಜಿನಿಯರ್ |
| ವಾಸ ಸ್ಥಳ | : | ಬೆಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಚಾಸಾ-1 ನನ್ನ ತಂಗಿ. ಚಾಸಾ-2 ನನ್ನ ತಾಯಿ.

ದಿ: 18-11-2005 ರಂದು ಚಾಸಾ-1 ಮತ್ತು 1ನೇ ಆರೋಪಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ರಮೇಶರವರ ತಾಯಿ ರಾಜಮ್ಮ, ಅಕ್ಕ ಸುಶೀಲ, ಅಕ್ಕನ ಮಗಳು ಗಿರಿಜಾರವರು 2005 ನೇ ಇಸವಿಯಲ್ಲಿ ಚಾಸಾ-1 ರವರನ್ನು ನೋಡಲು ಬಂದಿರುತ್ತಾರೆ. ಅವರು ಬಂದಾಗ ರೂಪಾಯಿ 5 ಲಕ್ಷ ಹಣ ಹಾಗೂ 40 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೇಳಿದ್ದರು. ಅದಕ್ಕೆ ನಾವು ಆಗುವುದಿಲ್ಲವೆಂದು ನಿರಾಕರಿಸಿರುತ್ತೇವೆ. ಮದುವೆ ತಪ್ಪುತ್ತದೆ ಎಂದು 2 ಲಕ್ಷ ಹಾಗೂ 24 ಪವನ್ ಚಿನ್ನಕ್ಕೆ ಒಪ್ಪಿ ಕೊಂಡಿರುತ್ತೇವೆ. ನಮ್ಮ ಕಡೆಯಿಂದ ನಾನು, ಚಾಸಾ-2, 4 ಮತ್ತು 5 ರವರು ಇದ್ದೇವು.

ದಿ: 18-11-2005 ರಂದು ಕೋಟೇಶ್ವರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಚಾಸಾ-1 ಮತ್ತು 1ನೇ ಆರೋಪಿಯ ವಿವಾಹವಾಗಿರುತ್ತದೆ. ಆರೋಪಿತರು ನಿಶ್ಚಿತಾರ್ಥದ ಒಂದು ವಾರದ ಮೊದಲೇ ಬಂದು ಸದ್ರಿ ರೂಪಾಯಿ 2ಲಕ್ಷ ಹಣವನ್ನು ತೆಗೆದುಕೊಂಡು ಹೋಗಿದ್ದರು. ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಒಂದು ನೆಕ್ಲೇಸು, 7 ಬಳೆಗಳು, ಕಿವಿ ಮತ್ತು ಕೈ ಉಂಗುರುಗಳು ಹಾಗೂ ಒಂದು ದೊಡ್ಡ ಚೈನು ಒಟ್ಟು ಹೀಗೆ 24 ಪವನ್ ಚಿನ್ನವನ್ನು ಹಾಕಿರುತ್ತೇವೆ. 1ನೇ ಆರೋಪಿಗೆ ಚೈನು, ಬ್ರಾಸ್ಲೇಟು, ಉಂಗುರು, ಬೆಳ್ಳಿಯ ಪಾತ್ರೆಗಳನ್ನು ಕೊಟ್ಟಿರುತ್ತೇವೆ.

ಮದುವೆಯಾದ ನಂತರ ಬೆಂಗಳೂರಿಗೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ನಂತರ ಜಾಸ್ತಿ ವರದಕ್ಷಿಣೆ ತರಲಿಲ್ಲ ಎಂದು ಆರೋಪಿಗಳು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಹಾಗೂ 1ನೇ ಆರೋಪಿಯ ತಮ್ಮ ಲೊಕೇಶ್ ಸಹ ಬಂದು ಬೈಯುತ್ತಿದ್ದರು. ಒಂದು ದಿನ ಆರೋಪಿತರು ಇದ್ದ ಸಮಯದಲ್ಲಿ ಲೊಕೇಶ್ ಮನೆಗೆ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿ ಹೋಗಿರುತ್ತಾರೆ. ಆಗ 1ನೇ ಆರೋಪಿ ಏನನ್ನೂ ಮಾತನಾಡಿರುವುದಿಲ್ಲ. ಚಾಸಾ-1ರವರು 1ನೇ ಆರೋಪಿಯ ತಾಯಿಯ ಹತ್ತಿರ ಕೇಳಿದಾಗ ಅವರು ಆತನು ಮದ್ಯಪಾನ ಮಾಡಿ ಬಂದು ಹೊಡೆಯುತ್ತಾನೆ ಏನು ಮಾಡಬೇಕಾಗುತ್ತೇ ನೀನೇ ಸುಧಾರಿಸಿಕೊಂಡು ಹೋಗಬೇಕು ಎಂದು ಹೇಳಿರುತ್ತಾರೆ. ಚಾಸಾ-1 ರವರಿಗೆ ನಿಮ್ಮ ಮನೆಯವರು ಸರಿ ಇಲ್ಲ ಎಂದು ಹೀಯಾಳಿಸುತ್ತಿದ್ದರು. ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು.

ಆ ಸಮಯದಲ್ಲಿ ಚಾಸಾ-1 ರವರು New Horizon Collegeನಲ್ಲಿ ಲ್ಯಾಬ್ Instructor ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-1 ರವರ ATM and Debit Card ಗಳನ್ನು ಆರೋಪಿ ಇಟ್ಟುಕೊಂಡು ಹಣವನ್ನು ಪಡೆಯುತ್ತಿದ್ದರು. ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದರೂ ಕೂಡ ಅವರ ಬಗ್ಗೆ ಗಮನ ಹರಿಸುತ್ತಿದ್ದರಲಿಲ್ಲ. ಚಾಸಾ-1 ರವರಿಗೆ ಶಸ್ತ್ರಚಿಕಿತ್ಸೆ ಆಗಿದ್ದಾಗ ನನ್ನ ತಮ್ಮ ಕಿರಣ್ ಆಚಾರ್ಯರವರು ಎಲ್ಲಾ ಖರ್ಚುಗಳನ್ನು ಭರಿಸಿರುತ್ತಾರೆ. ಚಾಸಾ-1 ರವರಿಗೆ ಯಾವಾಗಲೂ ಆರೋಗ್ಯ ಸರಿ ಇಲ್ಲದೆ ಇದ್ದಾಗ ಚಿಕಿತ್ಸೆ ಕೊಡಿಸಿರುವುದಿಲ್ಲ.

ಚಾಸಾ-1ರವರಿಗೆ ಸಂಬಂಧಪಟ್ಟ ಚೆಕ್ಕು ಪುಸ್ತಕವನ್ನು 1ನೇ ಆರೋಪಿಯೇ ಇಟ್ಟು ಕೊಂಡು 4-5 ಚೆಕ್ಕುಗಳಿಗೆ ಸಹಿಯನ್ನು ಪಡೆದು ದಾಖಲೆಗಳನ್ನು ಫೋರ್ಜರಿ ಮಾಡಿರುತ್ತಾರೆ. ಇದರಿಂದಾಗಿ ಶಿಖಾರಿಪುರ ನ್ಯಾಯಾಲಯದಲ್ಲಿ ಚೆಕ್ಕು ಬೌನ್ಸ್ ಸಹ ಚಾಸಾ-1 ರವರ ವಿರುದ್ದ ಹಾಕಿದ್ದರು. ಚಾಸಾ-1 ರವರಿಗೆ ಆ ಬಗ್ಗೆ ಏನೂ ಗೊತ್ತಿದ್ದಿರಲಿಲ್ಲ. ಪುನಃ ಚಾಸಾ-1 ರವರಿಗೆ ಆರೋಗ್ಯ ಸರಿ ಇಲ್ಲದೆ ಇದ್ದಾಗ ಆರೋಪಿಗಳು ಅವರನ್ನು ನೋಡಿಕೊಂಡಿರುವುದಿಲ್ಲ ಆ ಕಾರಣ ಚಾಸಾ-1 ರವರು ತನ್ನ ಸಹೋದರ ಕಿರಣ್ ರವರಿಗೆ ತಿಳಿಸಿದ್ದು ಅದರಂತೆ ಸದ್ರಿ ಕಿರಣ್ ರವರು ಚಾಸಾ-1 ರವರನ್ನು ಕುಂದಾಪುರಕ್ಕೆ ಕರೆದುಕೊಂಡು ಬಂದಿದ್ದರು. ಇಲ್ಲಿ ತೋರಿಸಿದಾಗ ಚಾಸಾ-1ರವರು ಗರ್ಭಿಣಿ ಎಂದು ಗೊತ್ತಾಗಿರುತ್ತದೆ. ಆ ವಿಚಾರವನ್ನು ಚಾಸಾ-1 ರವರು ಆರೋಪಿಗೆ ತಿಳಿಸಿದಾಗ ಅವಾಚ್ಯ ಶಬ್ದದಿಂದ ಬೈದಿರುತ್ತಾರೆ.

ದಿಃ 27-12-2013 ರಂದು ಚಾಸಾ-1ರವರು ಗಂಡು ಮಗುವಿಗೆ ಜನ್ಮ ನೀಡಿದ್ದು ಸದ್ರಿ ವಿಚಾರವನ್ನು 1ನೇ ಆರೋಪಿಗೆ ತಿಳಿಸಿರುತ್ತಾರೆ. ಅನಂತರ ದಿಃ 28-12-2013ರಂದು ಆರೋಪಿಗಳು

ಚಾಸಾ-1 ರವರನ್ನು ನೋಡಲು ಬಂದಿದ್ದು ಆದರೆ 1ನೇ ಆರೋಪಿ ಯಾವುದೇ ಖರ್ಚನ್ನು ಕೊಟ್ಟಿರುವುದಿಲ್ಲ. ಚಾಸಾ-1 ರವರು ಕುಂದಾಪುರಕ್ಕೆ ಬರುವ ಸಮಯದಲ್ಲಿ 1ನೇ ಆರೋಪಿ ನೀನು ಪುನಃ ನಮ್ಮ ಮನೆಗೆ ಬರಬೇಡ ನಿನಗೆ ವಿಚ್ಛೇಧನೆ ಕೊಡುತ್ತೇನೆ ಎಂದು ಹೇಳಿದ್ದನು.

1ನೇ ಆರೋಪಿಯ ಮಾವ ಮುಕುಂದ ಎಂಬುವರು ರಾಜಿ ಮಾಡಿಕೊಂಡು ಮಗುವಿನ ನಾಮಕರಣಕ್ಕೆ ಕರೆದುಕೊಂಡು ಬಂದಿದ್ದರು. ಮಗನಿಗೆ ಪ್ರಸಿದ್ದ್ ಎಂದು ಹೆಸರು ಇಟ್ಟಿರುತ್ತಾರೆ. ಮುಕುಂದ ಜೀವಂತ ಇದ್ದಾಗ 2-3 ಬಾರಿ ರಾಜಿ ಪಂಚಾಯಿತಿ ಮಾಡಿದ್ದರು. ಆದರೆ 1ನೇ ಆರೋಪಿ ಪುನಃ ಅದೇ ಚಾಳಿಯನ್ನು ಮುಂದುವರೆಸಿರುತ್ತಾರೆ. ಅನಂತರ ಮುಕುಂದರವರು ಮರಣ ಹೊಂದಿರುತ್ತಾರೆ. ಚಾಸಾ-1 ರವರನ್ನು ವಾಪಸ್ಸು ಕರೆದುಕೊಂಡು ಹೋಗಿರುವುದಿಲ್ಲ. ಪದೇ ಪದೇ ಚಾಸಾ-1 ರವರಿಗೆ ಹಣ ತೆಗೆದುಕೊಂಡು ಬಾ ಎಂದು ಪೀಡಿಸುತ್ತಿದ್ದರು.

ಚಾಸಾ-1ರವರು ಸಾಕಷ್ಟು ಸಹಿಸಿಕೊಂಡಿದ್ದು ಅನಂತರ ಸಹಿಸಿಕೊಳ್ಳಲಾಗದೆ ದಿಃ 26-04-2016 ರಂದು ಚಾಸಾ-1 ರವರು ದೂರನ್ನು ನೀಡಿರುತ್ತಾರೆ. ಇಲ್ಲಿಯವರೆಗೂ ಮಗುವನ್ನು ನೋಡಿಕೊಂಡಿರುವುದಿಲ್ಲ. ದೂರನ್ನು ಕೊಡುವ ಮೊದಲು ಆರೋಪಿಗಳು ಮನೆಯ ಹತ್ತಿರ ಬಂದು ನಾನು 2ನೇ ಮದುವೆಯಾಗುತ್ತೇನೆ ತೊಂದರೆ ಕೊಡಲು ಬಂದರೆ ನಿನ್ನನ್ನು, ನಿನ್ನ ತಾಯಿ ಹಾಗೂ ಸಹೋದರರನ್ನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ರೂಪಾಯಿ 2 ಲಕ್ಷ ಹಣ ಹಾಗೂ 24 ಪವನ್ ಚಿನ್ನವನ್ನು ಇದುವರೆಗೂ ವಾಪಸ್ಸು ಕೊಟ್ಟಿರುವುದಿಲ್ಲ.

ಚಾಸಾ-1 ಮತ್ತು ಅವರ ಮಗುವನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ. ದಿಃ 16-05-2016 ರಂದು ಪೊಲೀಸರು ಮಹಜರಿಗೆ ಮನೆಯ ಹತ್ತಿರ ಬಂದಿದ್ದರು. ಚಿನ್ನಾಭರಣವನ್ನು ಗಾಯತ್ರಿ ಜ್ಯುವೆಲ್ಲರ್ ಕುಂದಾಪುರದಲ್ಲಿ ಮಾಡಿಸಿರುತ್ತೇವೆ. ಪೊಲೀಸರಿಗೆ ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ</u>

ಚಾಸಾ-1 ರವರು ನಿಮ್ಮ ತಂಗಿನಾ ಅಥವಾ ಅಕ್ಕನಾ ಎಂದರೆ ಸಾಕ್ಷಿ ತಂಗಿ ಎಂದು ನುಡಿಯುತ್ತಾರೆ. ಚಾಸಾ-12 ರವರು ನಿಮ್ಮ ತಂಗಿನಾ ಅಥವಾ ಅಕ್ಕನಾ ಎಂದರೆ ಸಾಕ್ಷಿ ಅಕ್ಕ ಎಂದು ನುಡಿಯುತ್ತಾರೆ. ಚಾಸಾ-12 ರವರಿಗೂ ವಿವಾಹ ವಿಚ್ಛೇಧನ ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರ ವಿವಾಹ ಸಮಯದಲ್ಲಿ ನೀವು ಏನು ಕೆಲಸ ಮಾಡುತ್ತಿದ್ದು ಎಂದರೆ ಸಾಕ್ಷಿ ಕುಂದಾಪುರದ ವರ್ಕ್ಸ್ ಶಾಪ್ ನಲ್ಲಿ

ಫ್ಯಾಬ್ರಿಕೇಶನ್ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಯಾವ ಇಸವಿಯಲ್ಲಿ ಬೆಂಗಳೂರಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ 2005ರಲ್ಲಿ ಎಂದು ನುಡಿಯುತ್ತಾರೆ. ಮದುವೆ ಆದ ನಂತರ ಹೋಗಿರುತ್ತೀರಾ ಎಂದರೆ ಸಾಕ್ಷಿ ಮದುವೆ ಮೊದಲೇ ಹೋಗಿದ್ದೆ ಎಂದು ನುಡಿಯುತ್ತಾರೆ.

1ನೇ ಆರೋಪಿ ನಿಮ್ಮ ಸಂಬಂಧಿಕರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿಯನ್ನು ನಿಮಗೆ ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಬ್ರೋಕರ್ ಎಂದು ನುಡಿಯುತ್ತಾರೆ. ಸದ್ರಿಯವರ ಬ್ರೋಕರ್ ರವರ ಹೆಸರು ಏನು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುುತ್ತಾರೆ. ಯಾವ ದಿನಾಂಕದಂದು ಮಾತುಕತೆ ಆಗಿತ್ತು ಎಂದರೆ ಸಾಕ್ಷಿ ದಿನಾಂಕ ಗೊತ್ತಿರುವುದಿಲ್ಲ ಆದರೆ 2005 ರಲ್ಲಿ ಎಂದು ನುಡಿಯುತ್ತಾರೆ. ಆರೋಪಿಗಳು ನಿಮ್ಮ ಮನೆಗೆ ಎಷ್ಟು ಬಾರಿ ಬಂದಿರುತ್ತಾರೆ ಎಂದರೆ ಸಾಕ್ಷಿ 2-3 ಬಾರಿ ಬಂದಿರಬಹುದು ಎಂದು ನುಡಿಯುತ್ತಾರೆ. ಸದ್ರಿ 2-3 ಬಾರಿ ಬಂದಾಗ ನೀವು ಇದ್ದಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವರದಕ್ಷಿಣೆಯನ್ನು ಯಾವಾಗ ಕೇಳಿದ್ದರು ಎಂದರೆ ಸಾಕ್ಷಿ 2ನೇ ಬಾರಿ ಬಂದಾಗ ಕೇಳಿದ್ದರು ಎಂದು ನುಡಿಯುತ್ತಾರೆ. ಅದೇ ದಿನ ನೀವು ರೂಪಾಯಿ 2 ಲಕ್ಷ ಮತ್ತು 24 ಪವನ್ ಚಿನ್ನ ಕೊಡಲು ಒಪ್ಪಿರುತ್ತೀರಾ ಎಂದರೆ ಸಾಕ್ಷಿ ಅಲ್ಲ 3ನೇ ಬಾರಿ ಬಂದಾಗ ಒಪ್ಪಿದ್ದೇವು ಎಂದು ನುಡಿಯುತ್ತಾರೆ. ಮದುವೆಯಾಗುವ ಎಷ್ಟು ಪೂರ್ವದಲ್ಲಿ ಹಣ ಮತ್ತು ಚಿನ್ನವನ್ನು ಕೊಡಲು ಒಪ್ಪಿರುತ್ತೀರಿ ಎಂದರೆ ಸಾಕ್ಷಿ ಆಗಸ್ಟ್ ತಿಂಗಳಲ್ಲಿ ಆದರೆ ಯಾವ ದಿನಾಂಕ ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಹಣವನ್ನು ಮತ್ತು ಚಿನ್ನವನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹಣವನ್ನು ಮನೆಯಲ್ಲಿ ಕೊಟ್ಟಿರುತ್ತೇವೆ ಹಾಗೂ ಚಿನ್ನವನ್ನು ಮದುವೆಯ ಮುಂಚೆ ಕೊಟ್ಟಿದ್ದೇವು ಹಾಗೂ ಮದುವೆಯ ಸಮಯದಲ್ಲಿ ಸ್ವಲ್ಪ ಚಿನ್ನವನ್ನು ಕೊಟ್ಟಿರುತ್ತೇವೆ ಎಂದು

ನುಡಿಯುತ್ತಾರೆ. ಹಣ ಕೊಡುವ ಪೂರ್ವದಲ್ಲಿ ಯಾವ ಯಾವ ಒಡವೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಒಂದು ದೊಡ್ಡ ಚೈನು ಹಾಗೂ ಒಂದು ಉಂಗುರವನ್ನು 1ನೇ ಆರೋಪಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಒಟ್ಟು 6 ಪವನ್ ಚಿನ್ನ ಕೊಟ್ಟಿದ್ದೇವು ಎಂದು ನುಡಿಯುತ್ತಾರೆ. ಉಳಿದ ಚಿನ್ನವನ್ನು ಮದುವೆ ಹಾಲ್ ನಲ್ಲಿ ಕೊಟ್ಟಿರುತ್ತಿರೋ ಅಥವಾ ಮದುವೆ ಕೋಣೆಯಲ್ಲಿ ಕೊಟ್ಟಿರುತ್ತೀರೋ ಎಂದರೆ ಸಾಕ್ಷಿ ಉಳಿದ ಚಿನ್ನವನ್ನು ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಹಾಕಿರುತ್ತೇವೆ ಎಂದು ನುಡಿಯುುತ್ತಾರೆ. ಎಷ್ಟು ಪವನ್ ಚಿನ್ನವನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 18 ಪವನ್ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಏನೆಲ್ಲಾ ಚಿನ್ನವನ್ನು ಮದುವೆ ಸಮಯದಲ್ಲಿ ಚಾಸಾ-1 ರವರಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 13 ಪವನ್‌ನ 7 ಬಳೆಗಳು, 1 ಪವನ್ ನ ಒಂದು ಓಲೆ ಹಾಗೂ 4 ಪವನ್ ನ ದೊಡ್ಡ ನೆಕ್ಲೇಸು ಎಂದು ನುಡಿಯುತ್ತಾರೆ.

ಚಿನ್ನ ಮತ್ತು ಹಣವನ್ನು ಕೊಡುವ ಸಮಯದಲ್ಲಿ ನಿಮ್ಮ ಮನೆಯವರನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ಬೇರೆ ಯಾರೂ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ಹಣವನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ಇಬ್ಬರು ತಮ್ಮಂದಿರು ಉಳಿತಾಯ ಮಾಡಿದ ಹಣವನ್ನು ಸೇರಿಸಿ ಕೊಟ್ಟಿರುತ್ತೇವೆ ಆದರೆ ಯಾರು ಯಾರು ಎಷ್ಟು ಹಣ ಕೊಟ್ಟಿರುತ್ತೇವೆ ಎಂದು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಹಣ ಮತ್ತುಚಿನ್ನವನ್ನು ಕೊಡುವ ಸಮಯದಲ್ಲಿ ಪೋಟೋ ಅಥವಾ ವೀಡಿಯೋ ತೆಗೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುುತ್ತಾರೆ. ಏನಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಏನೇನು ಚಿನ್ನವನ್ನು ಹಾಕಬೇಕೆಂದು ಆರೋಪಿಗಳು ಹೇಳಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆದರೆ ಇಷ್ಟು ಪವನ್ ಚಿನ್ನ ಬೇಕು ಎಂದು ಕೇಳಿದ್ದರು ಎಂದು ನುಡಿಯುತ್ತಾರೆ. ಚಾಸಾ-1 ರವರ ಬಳಿ ಮೊದಲೇ ಚಿನ್ನ ಇತ್ತಾ ಅಥವಾ

ಆರೋಪಿಗಳು ಹೇಳಿದ ನಂತರ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಆರೋಪಿಗಳು ಕೇಳಿದ ನಂತರ 2005 ರಲ್ಲಿ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಚಿನ್ನವನ್ನು ಮಾಡಿಸಲು ಆರ್ಡರ್ ಕೊಡಲು ನೀವು ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಹಣವನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಮನೆಯ ಹಾಲ್ ನಲ್ಲಿ ಎಂದು ನುಡಿಯುತ್ತಾರೆ. ಎಷ್ಟು ದಿನಗಳ ಕಾಲ ಚಾಸಾ-1 ಮತ್ತು 1ನೇ ಆರೋಪಿ ಪತಿ ಪತ್ನಿಯರಾಗಿ ಸಂಸಾರ ಮಾಡಿದ್ದರು ಎಂದರೆ ಸಾಕ್ಷಿ ನನ್ನ ಪ್ರಕಾರ 2 ತಿಂಗಳು ಮಾತ್ರ ಎಂದು ನುಡಿಯುತ್ತಾರೆ. ಮದುವೆ ಸಮಯದಲ್ಲಿ ಚಾಸಾ-1 ರವರ ಗಂಡ ಏನು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರದ್ದು ಕಂಪೆನಿ ಇತ್ತು ಎಂದು ನುಡಿಯುತ್ತಾರೆ. ಮದುವೆಯಾದ ಎಷ್ಟು ದಿನಗಳ ನಂತರ ಚಾಸಾ-1ರವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಮದುವೆಯ ದಿವಸವೇ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

1ನೇ ಆರೋಪಿ ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದಾರೆ ಎಂದು ನಿಮಗೆ ಪ್ರಥಮವಾಗಿ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ 2013 ರಲ್ಲಿ ಎಂದು ನುಡಿಯುತ್ತಾರೆ. ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ಚಾಸಾ-1 ರವರೇ ಫೋನ್ ಮಾಡಿ ತಿಳಿಸಿರುತ್ತಾರೆ. ಆ ಸಮಯದಲ್ಲಿ ನೀವು ಎಲ್ಲಿ ಇದ್ದೀರಿ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಎಂದು ನುಡಿಯುತ್ತಾರೆ. ಮದುವೆಯಾದ 2 ತಿಂಗಳಲ್ಲಿ ತೊಂದರೆ ಕೊಡುತ್ತಿದ್ದಾರೆ ಎಂದು ನಿಮಗೆ ಯಾರು ಹೇಳಿದ್ದು ಎಂದರೆ ಸಾಕ್ಷಿ ಚಾಸಾ-1 ರವರೇ 2013ರಲ್ಲಿ ಹೇಳಿದ್ದರು ಎಂದು ನುಡಿಯುತ್ತಾರೆ.

2005 ರಿಂದ 2013ರವರೆಗೂ ಚಾಸಾ-1 ರವರು ನಿಮ್ಮ ಸಂಪರ್ಕದಲ್ಲಿ ಇದ್ದರಾ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. 2013ರವರೆಗೆ 1ನೇ ಆರೋಪಿ ಹಿಂಸೆ

ಕೊಡುತ್ತಿದ್ದ ಬಗ್ಗೆ ಹೇಳಿರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿಯು ನಿಮ್ಮ ಮನೆಗೆ ಎಷ್ಟು ಬಾರಿ ಬಂದಿರುತ್ತಾರೆ ಎಂದರೆ ಸಾಕ್ಷಿ 4-5 ಬಾರಿ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 1ನೇ ಆರೋಪಿ ಒಟ್ಟಿಗೆ ಬರುತ್ತಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆಗ ಸ1ನೇ ಆರೋಪಿ ಚೆನ್ನಾಗಿ ಇದ್ದರಾ ಎಂದರೆ ಸಾಕ್ಷಿ ತೋರಿಕೆ ಹಾಗೆ ಚೆನ್ನಾಗಿ ಇದ್ದರು ಎಂದು ನುಡಿಯುತ್ತಾರೆ. ಅಂದಾಜು ಮದುವೆಯಾದ ಎಷ್ಟು ವರ್ಷದ ಒಳಗೆ 4-5 ಬಾರಿ ಬಂದಿರುತ್ತಾರೆ ಎಂದರೆ ಸಾಕ್ಷಿ ಒಂದು ವರ್ಷದೊಳಗೆ ಎಂದು ನುಡಿಯುತ್ತಾರೆ.

1ನೆ ಆರೋಪಿ ಚಾಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆ ತರುವಂತೆ ಕಿರುಕುಳ ನೀಡುತ್ತಿದ್ದಾರೆ ಎಂದು ನಿಮಗೆ ಮೊದಲು ಯಾರು ಹೇಳಿದ್ದು ಎಂದರೆ ಸಾಕ್ಷಿ ಚಾಸಾ-1 ರವರು 2013ರಲ್ಲಿ 1ನೇ ಆರೋಪಿಯ ಮನೆಯಲ್ಲಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಚಿತ್ರಹಿಂಸೆ ಕೊಡುವುದನ್ನು ನೋಡಿರುವುದಿಲ್ಲ ಚಾಸಾ-1 ರವರು ಹೇಳಿದ್ದರಿಂದ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1 ರವರು ಹೇಳುವ ಪ್ರಕಾರ ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಡೆದಿದೆ ಎಂದು ಹೇಳಿರುವ ಎಲ್ಲಾ ಘಟನೆಗಳು ಬೆಂಗಳೂರಿನಲ್ಲಿ ನಡೆದಿದ್ದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಖಾಸಗಿ ಪಿರ್ಯಾದಿಯನ್ನು ಸಲ್ಲಿಸಲು ವಕೀಲರಿಗೆ ಮಾಹಿತಿ ಕೊಡಲು ಯಾರು ಬರುತ್ತಿದ್ದರು ಎಂದರೆ ಸಾಕ್ಷಿ ಚಾಸಾ-1 ಮತ್ತು ಚಾಸಾ-4 ರವರು ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 4 ರವರು ವಕೀಲರಿಗೆ ಏನೆಲ್ಲಾ ಮಾಹಿತಿ ನೀಡಿರುತ್ತಾರೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2013ರ ಲ್ಲಿ ಚಾಸಾ-1 ರವರು ನಿಮಗೆ ಪೋನು ಮುಖಾಂತರ ಹೇಳಿದೆ ಎಂದು ಹೇಳಿರುವ ಮಾಹಿತಿಗಳ ಆಧಾರದ ಮೇಲೆ ನೀವು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಚಾಸಾ-1 ರವರು ಚಿತ್ರ ಹಿಂಸೆ ಕೊಟ್ಟ ಬಗ್ಗೆ ಹಾಗೂ ವರದಕ್ಷಿಣೆ ಕೇಳಿದ ಬಗ್ಗೆ, ಅವಾಚ್ಯ ಶಬ್ದಗಳಿಂದ ಬೈದ ಬಗ್ಗೆ ಹಾಗೂ ಚೆಕ್ಕನ್ನು ದುರಪಯೋಗಪಡಿಸಿಕೊಂಡ ಬಗ್ಗೆ ಹಾಗೂ 1ನೇ ಆರೋಪಿಯ ತಮ್ಮ ಮದ್ಯಪಾನ ಮಾಡಿ ಬಂದು ಹಲ್ಲೆ ಮಾಡಿದ ಬಗ್ಗೆ 2016ರ ಮೊದಲು ಯಾವುದೇ ಪೊಲೀಸ್ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಕುಂದಾಪುರದ ಪೊಲೀಸ್ ಠಾಣೆಯಲ್ಲಿ ದಿಃ 26-04-2016 ರಂದು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ದೂರನ್ನು ಯಾರು ಬರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ಚಾಸಾ-1 ಮತ್ತು 4 ರವರು ಎಂದು ನುಡಿಯುತ್ತಾರೆ. ನೀವು ಹೋಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು 4 ರವರು ನೀಡಿದ ದೂರಿನ ಮೇಲೆ ಪೊಲೀಸರು ದೂರನ್ನು ದಾಖಲಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ಸಾಕ್ಷಿ ಹೇಳುತ್ತಿರುವುದು ಚಾಸಾ-1 ರವರು ಸಲ್ಲಿಸಿದ ಖಾಸಗಿ ದೂರಿಗೋ ಅಥವಾ ಕುಂದಾಪುರ ಠಾಣೆಯಲ್ಲಿ ದಾಖಲಿಸಿರುವ ದೂರಿಗೋ ಎಂದರೆ ಸಾಕ್ಷಿ 2ಕೇಸಿಗಳಿಗೂ ಸೇರಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಹೇಳುತ್ತಾರೆ. ಪೊಲೀಸ್ ಠಾಣೆಯಲ್ಲಿ ಎಷ್ಟು ಜನರ ವಿರುದ್ದ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮನ್ನು ಪೊಲೀಸರು ಯಾವಾಗ ಸಂಪರ್ಕ ಮಾಡಿರುತ್ತಾರೆ ಎಂದರೆ ಸಾಕ್ಷಿ ದಿಃ 16-05-2016 ಎಂದು ನುಡಿಯುತ್ತಾರೆ. ಸದ್ರಿ ದಿನ ನಿಮ್ಮ ಸಹಿ ಪಡೆದಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರು ಜರುಗಿಸಿದ ದಾಖಲೆಯನ್ನು ಓದಿ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದ್ರಿ ದಿನ ಪೊಲೀಸ್ ಠಾಣೆಗೆ ನೀವು ಹೋಗಿರುತ್ತೀರಾ ಎಂದರೆ ಸಾಕ್ಷಿ ನಾನು ಠಾಣೆಗೆ ಹೋಗಿರುವುದಿಲ್ಲ ಎಂದು ನುಡಿಯೂತ್ತಾರೆ.

ನಿಮ್ಮ ಹೇಳಿಕೆಯನ್ನು ಪೊಲೀಸರು ಕೈಯಲ್ಲಿ ಬರೆದುಕೊಂಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಹೇಳಿಕೆ ಎಷ್ಟು ಪುಟ ಇತ್ತು ಎಂದರೆ ಸಾಕ್ಷಿ 2 ಪುಟ ಎಂದು ನುಡಿಯುತ್ತಾರೆ. ಟೈಪ್ ಮಾಡಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹೇಳಿಕೆ ನೀಡುವ ಸಮಯದಲ್ಲಿ 7 ಪವನ್ ಚಿನ್ನವನ್ನು ಮೊದಲೇ ಕೊಟ್ಟಿದ್ದೇವು ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿ ಆ ವಿಚಾರವನ್ನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಪೊಲೀಸರು ಹೇಳಿಕೆಯನ್ನು ಟೈಪ್ ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ಮನೆಯಲ್ಲಿ ಬರೆದುಕೊಂಡಿದ್ದರು ಎಂದು ನುಡಿಯುತ್ತಾರೆ. ಬೇರೆ ಯಾರು ಆ ಸಮಯದಲ್ಲಿ ಇದ್ದರು ಎಂದರೆ ಸಾಕ್ಷಿ ನಾನು, ಚಾಸಾ-1, 2, 4 ಮತ್ತು 12 ರವರು ಇದ್ದೇವು ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಪೊಲೀಸರು ಬಂದಿದ್ದರು ಎಂದರೆ ಸಾಕ್ಷಿ 11-12 ಗಂಟೆ ಇರಬಹುದು ಎಂದು ನುಡಿಯುತ್ತಾರೆ. ಯಾವ ಪೊಲೀಸರು ಬಂದಿದ್ದರು ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಚಾಸಾ-1 ರವರು ಹಲ್ಲೆ ಸಂಬಂಧ ಚಿಕಿತ್ಸೆ ಪಡೆರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಹೇಳಿಕೆಯಲ್ಲಿ ಪೊಲೀಸರು ಏನೆಲ್ಲಾ ಬರೆದುಕೊಂಡಿರುತ್ತಾರೆ ಎಂದು ಈಗ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ನಾನು ಏನು ಹೇಳಿರುತ್ತೀನೋ ಅದನ್ನು ಹೇಳುತ್ತೇನೆ ಎಂದು ನುಡಿಯುತ್ತಾರೆ. 2013ರಲ್ಲಿ ಚಾಸಾ-1 ರವರು ನನಗೆ ಫೋನ್ ಮುಖಾಂತರ ಆರೋಪಿಗಳು ತೊಂಂದರೆ ನೀಡುತ್ತಿದ್ದಾರೆ ಎಂದು ಹೇಳಿರುವ ವಿಚಾರವನ್ನು ನಿಮ್ಮ ಹೇಳಿಕೆಯಲ್ಲಿ ಕಂಡು ಬರುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನೀವು ಹೇಳುವ ಹೇಳಿಕೆಯಲ್ಲಿ ಸದ್ರಿ ವಿಚಾರ ಕಂಡು ಬರುವುದಿಲ್ಲ ಹಾಗೂ ಪೊಲೀಸರು ನಿಮ್ಮ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು

ನುಡಿಯುತ್ತಾರೆ. ಚಾಸಾ-1 ರವರು ಈಗ ವಿವಾಹ ವಿಚ್ಛೇಧನೆ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1ನೇ ಆರೋಪಿ ತನ್ನ ಕಂಪೆನಿಯಲ್ಲಿ ಸ್ವಲ್ಪ ನಷ್ಟ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ-1ರವರ ಬೇಡಿಕೆಯನ್ನು ಸರಿಯಾಗಿ ಈಡೆರೆಸಿರುವುದಿಲ್ಲ ಎಂಬ ಕಾರಣದಿಂದ ಚಾಸಾ-1 ರವರೇ ಆರೋಪಿಯ ಮನೆಯನ್ನು ಬಿಟ್ಟು ಬಂದಿರುತ್ತಾರೆ ಹಾಗೂ ಆರೋಪಿಗಳು ಚಾಸಾ-1 ರವರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಹಾಗೂ ವರದಕ್ಷಿಣೆ ತರುವಂತೆ ಕೇಳಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಆರೋಪಿಗಳು ಯಾವುದೇ ವರದಕ್ಷಿಣೆ ಹಣವನ್ನು ಕೇಳಿರುವುದಿಲ್ಲ ಹಾಗೂ ನೀವು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಮತ್ತು ನಿಮಗೆ ಸದ್ರಿ ಹಣ ಕೊಡವ ಸಾಮಾರ್ಥ್ಯ ಇದ್ದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಯಾವುದೇ ಘಟನೆ ನಡೆಯದೆ ಇದ್ದರೂ ಚಾಸಾ-1ರವರು ಹೇಳಿದಂತೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೊಲೀಸರು ನಿಮ್ಮ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ನೀವು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳಿಂದ ಹಣವನ್ನು ಪಡೆಯುವ ಸಲುವಾಗಿ ಆರೋಪಿಗಳ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**(ಶ್ರೀನಿವಾಸ ಕೆ.ಆರ್)**
**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**